ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

13

ಇಲಾಖೆ / ವಿಷಯ : DEPARTMENT / SUBJECT: ಲೋಕಸಭಾ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE 22/3/21

ಮುಂಬೈನಲ್ಲೇ 3 ಸಾವಿರ ಕೇಸು । ಕುಂಭಮೇಳದ ವೇಳೆ ಪರೀಕ್ಷೆ ನಡೆಸಲು ಸೂಚನೆ

# ಮಹಾಕ್ಕೆ ನಿಲ್ಲದ ಸೋಂಕಿನ ಆಘಾತ

ನವದೆಹಲಿ: ಮಹಾರಾಷ್ಟ್ರದಲ್ಲಿ ಮತ್ತೊಮ್ಮೆ ಬಿರುಸಾಗಿರುವ ಸೋಂಕು 2ನೇ ಹಂತದ್ದಾಗಿದೆ. ಅದು ಕಡಿಮೆ ತೀವ್ರತೆಯದ್ದಾದರೂ, ಹೆಚ್ಚಿನ ರೀತಿಯಲ್ಲಿ ಹರಡುವ ಸಾಮರ್ಥ್ಯ ಹೊಂದಿದೆ ಎಂದು ಸೋಂಕು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಇದೇ ವೇಳೆ ಮಹಾರಾಷ್ಟ್ರದಲ್ಲಿ ಭಾನುವಾರ 30,355, ಮುಂಬೈನಲ್ಲಿ 3,775 ಸೋಂಕು ಪ್ರಕರಣ ದೃಢಪಟ್ಟಿದೆ.

ಈ ನಡುವೆ, ದೇಶದ 6 ರಾಜ್ಯಗಳಲ್ಲಿ ಹೊಸತಾಗಿ ವರದಿಯಾಗುತ್ತಿರುವ ಶೇ.83ರಷ್ಟು ಸೋಂಕು ಕೇಸುಗಳು ಇವೆ. ಶನಿವಾರದಿಂದ ಭಾನುವಾರದ ಅವಧಿಯಲ್ಲಿ ದೇಶದಲ್ಲಿ 43,846 ಹೊಸತಾಗಿ ಸೋಂಕು ದೃಢಪಟ್ಟಿದೆ ಮತ್ತು 197 ಮಂದಿ ಅಸುನೀಗಿದ್ದಾರೆ. ಸತತ 11ನೇ ದಿನ ಈ ಏರಿಕೆಯಾಗುತ್ತಿದೆ. ಚೇತರಿಕೆ ಪ್ರಮಾಣ ಶೇ.95.96ಕ್ಕೆ ಕುಸಿತವಾಗಿದೆ. ಸಕ್ರಿಯ ಸೋಂಕು ಸಂಖ್ಯೆ 3,09,087ಕ್ಕೆ ಏರಿಕೆಯಾಗಿದೆ.

ಮರೆಯಬೇಡಿ: ಉತ್ತರಾಖಂಡದಲ್ಲಿ ನಡೆಯಲಿರುವ ಕುಂಭ ಮೇಳದ ವೇಳೆ ಸೋಂಕು ಹರಡದಂತೆ ಕ್ರಮ ಕೈಗೊಳ್ಳಿ, ಪರೀಕ್ಷೆಗಳನ್ನು ನಡೆಸಲು ಸಿದ್ಧತೆ ನಡೆಸಿ ಎಂದು ಕೇಂದ್ರ ಸರ್ಕಾರ, ಉತ್ತರಾಖಂಡ ಸರ್ಕಾರಕ್ಕೆ ಪತ್ರ ಮೂಲಕ ಸೂಚಿಸಿದೆ. ಜತೆಗೆ ಅಗತ್ಯ ನೆರವು ನೀಡುವುದಾಗಿ ಹೇಳಿದೆ.

ಉವಾ 22/3/21

## ನಾಳೆಗೆ ಲಾಕ್‌ಡೌನ್ ಜಾರಿಯಾಗಿ ವರ್ಷ

ಕೊರೊನಾ ಹಿನ್ನೆಲೆಯಲ್ಲಿ ದೇಶಾದ್ಯಂತ 2020ರ ಮಾ.23ಕ್ಕೆ ಲಾಕ್‌ಡೌನ್ ಪ್ರಕಟಿಸಲಾಗಿತ್ತು. ಮಂಗಳವಾರಕ್ಕೆ (ಮಾ.23) ಸರಿಯಾಗಿ ಒಂದು ವರ್ಷ ಪೂರ್ತಿಯಾಗಲಿದೆ. ಅದಕ್ಕೆ ಪೂರ್ವ ಭಾವಿಯಾಗಿ 2020ರ ಮಾ. 21ರಂದು ಜನತಾ ಕರ್ಫ್ಯೂ ಜಾರಿಯಾಗಿತ್ತು. ಭಾನುವಾರಕ್ಕೆ ಅದು ಜಾರಿಯಾಗಿ 1 ವರ್ಷ ಪೂರ್ತಿಗೊಂಡಿದೆ. ಮೊದಲ ಹಂತದ ಲಾಕ್‌ಡೌನ್ 2020ರ ಮಾ.23ರಿಂದ ಏ.14ರ ವರೆಗೆ, 2ನೇ ಹಂತ ಏ.15 ರಿಂದ ಮೇ 3, ಮೇ 4ರಿಂದ 17ರ ವರೆಗೆ 3ನೇ ಮತ್ತು 2020 ಮೇ 18ರಿಂದ 2020 ಮೇ 31ರ ವರೆಗೆ ಕೊನೇಯ ಹಂತದ ಲಾಕ್‌ಡೌನ್ ಜಾರಿಯಾಗಿತ್ತು.

## ಸ್ಪೀಕರ್‌ಗೆ ಸೋಂಕು

ಲೋಕಸಭೆ ಸ್ಪೀಕರ್ ಓಂ ಬಿರ್ಲಾ (58) ಅವರಿಗೆ ಸೋಂಕು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಅವರನ್ನು ನವದೆಹಲಿಯಲ್ಲಿರುವ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆಗೆ ದಾಖಲಿಸಲಾಗಿದೆ.

